ಅಧ್ಯಕ್ಷರು : ನೀವು ರದ್ದುಪಡಿಸಿರುವುದನ್ನು ಬೇರೆ ಕಡೆ ಹಾಕಿ ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮುಖ್ಯಮಂತ್ರಿಗಳೇ ತಪ್ಪಾಗಿ ತಿಳಿದುಕೊಳ್ಳಬೇಡಿ, ಈಗ ಬೇರೆ ಟೈಮ್ ಇಲ್ಲ.

ಶ್ರೀ ಕೆ.ಬಿ. ಪ್ರಸನ್ನಕುಮಾರ್ : ಸರ್, ಉತ್ತರ ಕೊಡಿಸಿ, ತುಂಬಾ ತೊಂದರೆಯಾಗುತ್ತಿದೆ.

ಅಧ್ಯಕ್ಷರು : ಆಯಿತು, ಹೇಳಿದ್ದಾರೆ,

ಶ್ರೀ ಯು.ಟಿ.ಖಾದರ್ : ಜನಸಾಮಾನ್ಯರಿಗೆ ಯಾವುದೇ ತೊಂದರೆ ಇಲ್ಲ..

ಅಧ್ಯಕ್ಷರು : ಮಂತ್ರಿಗಳೇ ಏನಾಗಿದೆ ಎಂದರೆ ಜಿಲ್ಲಾ ಸರ್ಜನ್‌ರವರಿಗೆ ಕೆಲವು ಅಧಿಕಾರಗಳು ಇವೆ. ಸರ್ಟಿಫಿಕೇಟ್ ಕೊಡುವುದು. ವಗ್ಯೆರೆ, ವಗ್ಯೆರೆ, ಏನೇನೋ ಇರುತ್ತವೆ. ಈಗ ಜಿಲ್ಲಾ ಸರ್ಜನ್ ಇಲ್ಲದೇ ಹೋದರೆ ಆ ಜವಾಬ್ದಾರಿಯನ್ನು ಯಾರು ನಿರ್ವಹಿಸಬೇಕು ಎನ್ನುವುದು ಪ್ರಶ್ನೆ ಬರುತ್ತದೆ.

ಶ್ರೀ ಯು.ಟಿ. ಖಾದರ್ : ಒಂದು ಆಸ್ಪತ್ರೆಯಲ್ಲಿ ಒಂದು Medical Superintendent ಮತ್ತೊಂದು DMO ಎರಡೂ posts ಇರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಸರ್ಟಿಫಿಕೇಟ್ ಇನ್ನಿತರೆ ಎಲ್ಲಾ ಸೌಲಭ್ಯಗಳನ್ನು ಕೊಡಲಿಕ್ಕೆ Resident Medical Officerಗೆ ಸಂಪೂರ್ಣವಾದ ಅಧಿಕಾರ ಇದೆ. ಅವರು ಆ ಕೆಲಸವನ್ನು ಮಾಡುತ್ತಿಲ್ಲ.

ಅಧ್ಯಕ್ಷರು : ಅದಕ್ಕೆ ಒಂದು Government Order ಹೊರಡಿಸಿಬಿಡಿ.

ಶ್ರೀ ಯು.ಟಿ.ಖಾದರ್ : G.O ಹೊರಸಿದ್ದೇವೆ.

ಅಧ್ಯಕ್ಷರು : ಆಯಿತು.

4) ವಿಷಯ : Forest Rights Act ಅದರಡಿ FRCಗಳ ಮುಂದೆ ರೈತರು ಅರ್ಜಿಗಳನ್ನು ಹಾಕಿಕೊಂಡಿರುವ ಬಗ್ಗೆ.

ಶ್ರೀ ಬಿ.ಬಿ. ನಿಂಗಯ್ಯ(ಮೂಡಿಗೆರೆ) : ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ...

ಅಧ್ಯಕ್ಷರು : ಈಗ ನಮ್ಮ ಕಾನೂನು ಸಚಿವರು ಎಲ್ಲರೂ ಸೇರಿ ಮಾತನಾಡಿದ್ದೇವೆ. ಅರಣ್ಯ ಸಚಿವರು ಕೊನೆಗೆ ಬಂದರು.

ಶ್ರೀ ಬಿ.ಬಿ. ನಿಂಗಯ್ಯ : ಅದಕ್ಕೆ ಅವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಈಗ ನೀವು ಬೇರೆ ವಿಷಯ ಹೇಳಿದರೆ ಮತ್ತಷ್ಟು ತಲೆಯ ಮೇಲೆ ಕಲ್ಲು ಬೀಳುತ್ತದೆ. ಅವರು ಹೇಳಿದ್ದು, ಅರಣ್ಯ ಸಚಿವರು ನೀವು ಕುಳಿತುಕೊಂಡು ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಬಿ.ಬಿ. ನಿಂಗಯ್ಯ : ತಮ್ಮ ಮುಖಂಡತ್ವದಲ್ಲಿ ಇದು ಆಗಿದೆ. ನಾನು ಹೇಳುವುದು FRA ಏನಿದೆ, Forest Rights Act ಅದರಡಿಯಲ್ಲಿ FRCಗಳ ಮುಂದೆ ನಮ್ಮಲ್ಲಿ ರೈತರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ.

ಅಧ್ಯಕ್ಷರು : ಹಾರಿಕೆ ಮೇಲೆ ಏನಾದರೂ ಉತ್ತರ ಕೊಟ್ಟು ಮತ್ತೆ ತಲೆ ಮೇಲೆ ಕಲ್ಲು ಹಾಕಿಕೊಳ್ಳಬೇಡಿ. ನಮ್ಮ ಕಾನೂನು ಸಚಿವರಿಗೆ ಮನವರಿಕೆಯಾಗಿದೆ, ದಯವಿಟ್ಟು ಅವರು ನೀವು ಕುಳಿತುಕೊಂಡು ಅದನ್ನು ಬಗೆಹರಿಸಿಕೊಳ್ಳಿ.

ಶ್ರೀ ಬಿ. ರಮಾನಾಥ ರೈ : ನಾವು ಈ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಸುನೀಲ್ ಕುಮಾರ್ (ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು):– ಮಾನ್ಯ ಅಧ್ಯಕ್ಷರೆ, ನಿನ್ನೆ ಕೊಲ್ಲೂರಿಗೆ ಸಂಬಂಧಪಟ್ಟಂತೆ ಶೂನ್ಯ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಇಂದು ಉತ್ತರ ಕೊಡುತ್ತೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಕೊಡಬೇಕೆಂದು ಏನೂ ಇಲ್ಲ. ಇದ್ದರೆ ನೋಡುತ್ತೇನೆ.

ಶ್ರೀ ವಿ. ಸುನೀಲ್ ಕುಮಾರ್ : ನಿನ್ನೆ ಕೊಲ್ಲೂರಿಗೆ ಸಂಬಂಧಪಟ್ಟಂತೆ ಶೂನ್ಯ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಇಂದು ಉತ್ತರ ಕೊಡುತ್ತೇವೆ ಎಂದು ಹೇಳಿದ್ದರು.

ಅಧ್ಯಕ್ಷರು : ಕೊಲ್ಲೂರಿಗೆ ಸಂಬಂಧಿಸಿದಂತೆ ಯಾರು ಉತ್ತರ ಹೇಳುತ್ತೀರಿ? ಕಂದಾಯ ಸಚಿವರು ಹೇಳಬೇಕು ಅಷ್ಟೆ.

ಶ್ರೀ ವಿ. ಸುನೀಲ್ ಕುಮಾರ್ : ನಿನ್ನೆ ಕೊಲ್ಲೂರಿಗೆ ಸಂಬಂಧಪಟ್ಟಂತೆ ಗಮನ ಸೆಳೆದಿದ್ದೇನೆ.

ಅಧ್ಯಕ್ಷರು : ಉತ್ತರ ಬಂದಿದೆ. ಕೊಡುತ್ತೇನೆ. ಓದಿಕೊಳ್ಳಿ.

ಶ್ರೀ ವಿ. ಸುನೀಲ್ ಕುಮಾರ್ : ಸರ್ಕಾರದ ಕಡೆಯಿಂದ ಉತ್ತರ ಹೇಳಬೇಕಲ್ಲವೇ? ಯಾರು ಕೇಳ್ರಿ ಸರ್ ?